
# ಬೆಳಕಿನ ಸಂಚಲನ

ಸಂಪುಟ 10, ಸಂಚಿಕೆ 6 ದ್ವೈಮಾಸಿಕ ವಾರ್ತಾಪತ್ರ ನವೆಂಬರ್–ಡಿಸೆಂಬರ್ 2022



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ನವೆಂಬರ್ 17, 2002)

**ಅನು: ಕಾಂಚನಲತಾ**

ನಾವು ಆಧ್ಯಾತ್ಮಿಕವಾಗಿ ಬೆಳೆದಾಗ, ನಾವು ಮುನ್ನಡೆ ಸಾಧಿಸಿದಾಗ, ನಾವು ವಿಕಾಸಗೊಂಡಾಗ, ಎಲ್ಲವನ್ನೂ ಸ್ವೀಕರಿಸುತ್ತೇವೆ. ಆದ್ದರಿಂದ ಭಗವಂತನು ನೀಡುತ್ತಿರುವ ಈ ಅದ್ಭುತವಾದ ಅವಕಾಶಗಳನ್ನು ಸದುಪಯೋಗ–ಪಡಿಸಿಕೊಳ್ಳೋಣ. ನಮಗಿರುವ ಸ್ವಾತಂತ್ರ್ಯದ ಮೌಲ್ಯವನ್ನು ನಾವು ಅರಿತುಕೊಳ್ಳೋಣ. ನಾವು ಇದನ್ನು ಸದಾಕಾಲವೂ ಹೊಂದಿರುತ್ತೇವೆ. ನಮ್ಮಲ್ಲಿಗೆ ಯಾರೇ ಬಂದರೂ, ನಮ್ಮನ್ನು ಯಾರೇ ಬಿಟ್ಟುಹೋದರೂ, ಎಲ್ಲರೂ ಸದಾ ಸ್ವತಂತ್ರರಾಗಿರುತ್ತಾರೆ. ನಾನು ಸಾವಿರಾರು ಬಾರಿ ಹೇಳಿರುವಂತೆ, ಸ್ವಾತಂತ್ರ್ಯವಿದ್ದಾಗ ನಾವು ಬೆಳೆಯುತ್ತೇವೆ. ಹೊರಗಿನಿಂದ ಬೇರೆ ಏನಾದರೂ ಬಂದರೆ, ನಾವು ಅದನ್ನು ಸ್ವೀಕರಿಸುವುದಿಲ್ಲ. ಅದನ್ನು ವಿರೋಧಿಸುತ್ತೇವೆ, ಧಿಕ್ಕರಿಸುತ್ತೇವೆ. ಒಳ್ಳೆಯದನ್ನೂ ಸಹ ಬಲವಂತವಾಗಿ ಹೇರಬಾರದು. ಇಲ್ಲಿ ನಮಗೆ ಸ್ವಾತಂತ್ರ್ಯ ಮತ್ತು ಪ್ರೀತಿಯಿಂದ ಕೂಡಿದ ಸುಂದರವಾದ ವಾತಾವರಣವಿದೆ ಮತ್ತು ಅವಕಾಶವಿದೆ. ನಾವು ಇದರೊಳಗೆ ಬೆಳೆಯೋಣ. ನಾವು ಮುಗುಳುನಗೆ ಬೀರೋಣ. ಅದೇ ಜೀವನದ ಉದ್ದೇಶ. ನಾವೂ ಮುಗುಳುನಗೆ ಬೀರೋಣ ಮತ್ತು ಆ ನಗುವನ್ನು ಬೇರೆಯವರಿಗೂ ಹರಡೋಣ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಕಾಂಚನಲತಾ**

ಧ್ಯಾನವನ್ನು ಹೇಳಿಕೊಡುವುದಕ್ಕಾಗಿ ಮಾನಸ ಫೌಂಡೇಶನ್ ಕೇಂದ್ರವನ್ನು, 1988ರಲ್ಲಿ ಸ್ಥಾಪಿಸಲು, ಗುರೂಜಿ ಕೃಷ್ಣಾನಂದರವರು ಮಹಾನ್ ತ್ಯಾಗಗಳನ್ನು ಮಾಡಿದರು. ಈ ಕೇಂದ್ರವನ್ನು ಪ್ರಾರಂಭಮಾಡಿದ ಗುಡಿಸಿಲಿನಲ್ಲಿ ವಾಸಮಾಡುತ್ತಿದ್ದ ಆ ಸಮಯದಲ್ಲಿಯೇ, ಪ್ರಕೃತಿ ಹಾಗೂ ಇತರರೊಡನೆ ಜನರು ಶಾಂತಿ ಮತ್ತು ಸಂಪೂರ್ಣ ಸಾಮರಸ್ಯದಿಂದ ಜೀವನ ನಡೆಸುವ ಪ್ರಪಂಚವೊಂದರ ಕನಸನ್ನು ಅವರು ಕಂಡರು. ಕಲಿಯಲು ಅವರ ಬಳಿಗೆ ಬಂದ ಜನರಿಗೆ, ಧ್ಯಾನವನ್ನು ಹಾಗೂ ನಂತರದಲ್ಲಿ ಲೈಟ್ ಚಾನಲಿಂಗ್‌ಅನ್ನು ಹೇಳಿಕೊಡಲು ಆರಂಭಿಸಿದರು. ಅವರ ಕನಸು ಈ ಜನರಲ್ಲಿ ಅಭಿವ್ಯಕ್ತಗೊಳ್ಳಲಾರಂಭಿಸಿತು. ಪ್ರತಿಯೊಬ್ಬರಿಗೂ ಲೈಟ್ ಚಾನಲಿಂಗ್ ತಂತ್ರವು ಸಿಗಲಿ ಎಂಬ ಉದ್ದೇಶದಿಂದ 2008ನೇ ಇಸವಿಯಲ್ಲಿ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಪ್ರಾರಂಭಿಸಿದರು. ಈಗ ಲಕ್ಷಾಂತರ ಜನರು ಲೈಟ್ ಚಾನಲ್‌ಮಾಡುತ್ತಿದ್ದಾರೆ, ಅವರ ಕನಸಿನ ಕಂಪನಗಳನ್ನು ಬಲಗೊಳಿಸುತ್ತಿದ್ದಾರೆ, ಅವರ ಕನಸು ಸಧ್ಯದಲ್ಲೇ ನನಸಾಗುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಕಾಂಚನಲತಾ**

ಲೈಟ್ ಚಾನೆಲಿಂಗ್ ಸಂಚಲನದಲ್ಲಿ ಅವಿಶ್ರಾಂತವಾಗಿ ಶ್ರಮಿಸುತ್ತಿರುವ ಎಲ್ಲಾ ಕಾರ್ಯಕರ್ತರಿಗಾಗಿ ನನ್ನ ಹೃದಯ ಮಿಡಿಯುತ್ತದೆ. ಅವರ ನಿಸ್ವಾರ್ಥ ವಿಧಾನ ಹಾಗೂ ಕೆಲಸದ ಬಗ್ಗೆ ಅವರಿಗಿರುವ ಒಲವು ಸದಾ ನನ್ನ ಮನ ಮುಟ್ಟುತ್ತದೆ. ಈ ಕೆಲಸಕ್ಕಾಗಿ ವೈಯಕ್ತಿಕ ಸಮಯವನ್ನು ಮತ್ತು ಸಂಪನ್ಮೂಲಗಳನ್ನು ವಿನಿಯೋಗಿಸುವುದು ಸುಲಭವಲ್ಲ, ವಿಶೇಷವಾಗಿ ನಾವು ಇಂತಹ ಸವಾಲಿನ ಸಮಯಗಳನ್ನು ಹಾದುಹೋಗುತ್ತಿರುವಾಗ. ಗುರೂಜಿಯವರ ಬಗ್ಗೆ ಅವರಿಗಿರುವ ಪ್ರೀತಿಯು ವರ್ಷದಿಂದ ವರ್ಷಕ್ಕೆ ಅವರು ಈ ಕೆಲಸವನ್ನು ಮಾಡುವಂತೆ ಮಾಡಿದೆ ಎಂದು ನನಗನಿಸುತ್ತದೆ. ಅವರು ಗುರೂಜಿಯವರ ಕನಸನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಅವರು ನಮ್ಮ ಕೆಲಸದ ಬೆನ್ನೆಲುಬು ಹಾಗೂ ಅವರ ಕೊಡುಗೆ ಅಪಾರವಾದುದು.

ಗುರೂಜಿ ಕೃಷ್ಣಾನಂದರವರ 10ನೇ ಮಹಾಸಮಾಧಿಯ ದಿನವಾದ ನವೆಂಬರ್ 23ರಂದು ಈ ಕಾರ್ಯದಲ್ಲಿ ನಮ್ಮನ್ನು ನಾವು ಪುನಃ ಸಮರ್ಪಿಸಿಕೊಳ್ಳೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ವಿಶ್ವವು ನಮಗೆ ಸಹಾಯ ಮಾಡಲು ಕಾಯುತ್ತಿದೆ. ಸಹಾಯ ಸ್ವೀಕರಿಸುವುದನ್ನು ನಾವು ಕಲಿಯಬೇಕು. ಸಹಾಯವನ್ನು ಸ್ವೀಕರಿಸಲು, ಆಧ್ಯಾತ್ಮಿಕರಾಗಿರಿ, ಒಳ್ಳೆಯವರಾಗಿರಿ, ಪ್ರಾಮಾಣಿಕರಾಗಿರಿ, ತಾಳ್ಮೆಯಿಂದಿರಿ, ವಿಶ್ವವನ್ನು ನಂಬಿರಿ ಮತ್ತು ಕಾಯಿರಿ. ನೀವು ಎಲ್ಲ ರೀತಿಯ ಕಷ್ಟಗಳಿಂದ ಹೊರಬರುವಿರಿ.
- ಅನಾವಶ್ಯಕವಾದ ವಾದಗಳಿಂದ, ಅನಾವಶ್ಯಕವಾದ ಭಿನ್ನಾಭಿಪ್ರಾಯಗಳಿಂದ ನಾವು ನಮ್ಮ ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತೇವೆ. ನಾವು ಯಾವುದೇ ಕ್ಷಣವನ್ನು ಅದ್ಭುತ ಕ್ಷಣವನ್ನಾಗಿ ಬದಲಿಸಿಕೊಳ್ಳಬಹುದು. ನಾವು ಹಂಚಿಕೊಳ್ಳುವ ಕ್ಷಣಗಳನ್ನು ಸುಂದರವಾಗಿಸಬಹುದು. ಅತಿ ಸಾಮಾನ್ಯ ವಿಷಯಗಳನ್ನು ಚರ್ಚಿಸುವಾಗಲೂ ಕೂಡ ನಾವು ಅವುಗಳನ್ನು ಉನ್ನತ ದೃಷ್ಟಿಕೋನದಿಂದ ನೋಡಬಹುದು.
- ಅನೇಕ ಅಜ್ಞಾನಗಳಿಂದಾಗಿ ನಾವು ಕಷ್ಟಗಳನ್ನು ಅನುಭವಿಸುತ್ತೇವೆ. ಸರಿಯಾದ ಆಯ್ಕೆಗಳನ್ನು ಮಾಡದೇ ಇರುವುದರಿಂದ ನಾವು ತೊಂದರೆಗೊಳಗಾಗುತ್ತೇವೆ. ತಪ್ಪುಗಳನ್ನು, ಸಂಪೂರ್ಣವಾದ ತಪ್ಪು ವಿಚಾರಗಳನ್ನು, ಕೇವಲ ಲೌಕಿಕ ವಿಚಾರಗಳನ್ನು ಹಿಂಬಾಲಿಸಿದಾಗ, ನಾವು ಕಷ್ಟಗಳನ್ನು ಅನುಭವಿಸುತ್ತೇವೆ. ಮತ್ತು ಎಲ್ಲಾ ರೀತಿಯ ಬಂಧನಗಳನ್ನು ಬೆಳೆಸಿಕೊಳ್ಳುತ್ತೇವೆ. ಬಂಧನದಲ್ಲಿ ಶಾಂತಿ ಇರುವುದಿಲ್ಲ.
- ನಾವು ನಮ್ಮ ಅಹಂನ ರೀತಿಗಳನ್ನು ಅನುಸರಿಸುತ್ತೇವೆ. ಕರ್ಮಗಳನ್ನು ಗಳಿಸುತ್ತೇವೆ. ಸಮಸ್ಯೆಗಳನ್ನು ತಂದು-ಕೊಳ್ಳುತ್ತೇವೆ ಮತ್ತು ಈ ಎಲ್ಲಾ ಜನ್ಮಗಳಲ್ಲೂ ನಮ್ಮ ಅಹಂನ ಮಾರ್ಗವನ್ನು ಅನುಸರಿಸಿದ್ದರಿಂದ, ಹಲವಾರು ಸಾಮರ್ಥ್ಯಗಳನ್ನು ಕಳೆದುಕೊಂಡಿದ್ದೇವೆ, ಭಗವಂತ-ನೊಂದಿಗಿನ ಸಂಪರ್ಕವನ್ನು ಕಳೆದುಕೊಂಡಿದ್ದೇವೆ. ನಮ್ಮ ಶಕ್ತಿಗಳನ್ನು ಕಳೆದುಕೊಂಡಿದ್ದೇವೆ. ನಮಗೆ ಶಾಂತಿ ಇಲ್ಲ.
- ಆಧ್ಯಾತ್ಮಿಕವಾಗಿ ಬೆಳೆಯಲು, ನಾವು ಚೈತನ್ಯಗಳನ್ನು ಗಳಿಸಬೇಕು. ಈ ಚೈತನ್ಯಗಳಿಂದ ನಮ್ಮ ಶಾರೀರಕ ವ್ಯವಸ್ಥೆಯನ್ನು ಶುದ್ಧೀಕರಿಸಬೇಕು, ನಮ್ಮ ಕರ್ಮಗಳನ್ನು ಸುಡಬೇಕು. ನಮ್ಮ ಅರಿವನ್ನು ಮೇಲೇರಿಸಿಕೊಳ್ಳ-ಬೇಕು ಮತ್ತು ವಾಸ್ತವವಾಗಿ ಭಗವಂತನ ಅನುಭವ-ವನ್ನು ಪಡೆಯಬೇಕು, ದೈವತ್ವವನ್ನು ಉನ್ನತ ಮಟ್ಟದಲ್ಲಿ ಅನುಭವಿಸಬೇಕು, ವಿವಿಧ ಮಟ್ಟಗಳಲ್ಲಿ ಅನುಭವಿಸಬೇಕು.
- ಯೋಗ ಎಂದರೆ ಸಮಚಿತ್ತದಲ್ಲಿರುವುದು. ಯೋಗವು ಭಗವಂತನಿರುವ ಸ್ಥಿತಿ. ಭಗವಂತನೇ ಪ್ರೀತಿ, ಭಗವಂತನೇ ಸತ್ಯ, ಆವನೇ ಅನಂತ, ಅವನೇ ಬೆಳಕು, ವಿವೇಕ ಮತ್ತು ಶಕ್ತಿಯ ಬೆಳಕು. ನಾವು ಇವುಗಳಲ್ಲಿ ಯಾವುದಾದರೊಂದಾದರೆ ಅಥವಾ ಇವುಗಳಲ್ಲಿ ಯಾವುದಾದರೂ ಒಂದನ್ನು ಪ್ರಕಟಗೊಳಿಸಬಲ್ಲೆವಾದರೆ, ಆಗ ನಾವು ಭಗವಂತನ ಸ್ಥಿತಿಯಲ್ಲಿ ಇದ್ದೇವೆ ಎಂದು ಹೇಳಬಹುದು. ಆಗ ನಾವು ಯೋಗದಲ್ಲಿರುತ್ತೇವೆ.

–ಗುರೂಜಿ ಕೃಷ್ಣಾನಂದ



ಬೆಂಗಳೂರಿನ ಎಬೆನೆಜರ್ ಕಾಲೇಜಿನ ಪ್ರಥಮ ವರ್ಷದ BCA ವಿದ್ಯಾರ್ಥಿಗಳು ಆಗಸ್ಟ್ 18ರಂದು ಮಾನಸ ಫೌಂಡೇಶನ್‌ಗೆ ಭೇಟಿನೀಡಿ ಲೈಟ್ ಚಾನಲ್ ಮಾಡಿದರು.



ಪುಣೆಯ ಕೃಷಿ ಕಾಲೇಜಿನ 1992ರ ಸಹಪಾಟಿಗಳ ತಂಡವು ಜುನ್ನಾರ್‌ನಲ್ಲಿರುವ ಗ್ರೇಪ್ಸಿ ಅಗ್ರಿ ಟ್ಯೂರಿಸ್ಟ್ ಸೆಂಟರ್‌ನಲ್ಲಿ ಸೆಪ್ಟೆಂಬರ್ 11ರಂದು ಲೈಟ್ ಚಾನಲ್ ಮಾಡಿದರು.



ಬೆಂಗಳೂರಿನ ವಾಗ್ದೇವಿ ವಿಲಾಸ ಶಾಲೆಯ ಶಿಕ್ಷಕರು ಸೆಪ್ಟೆಂಬರ್ 21ರಂದು ಲೈಟ್ ಚಾನಲ್ ಮಾಡಿದರು

# ಪೃಥ್ವಿಯ ಆರೋಹಣ

**ನಿಖಿಲ್ ಗಾಂಧಿ, ಅನು: ಕಾಂಚನಲತಾ**

ವಿಶೇಷ ದಿನಗಳಲ್ಲಿ ನಾನು ಒಂದು ಕೃತಜ್ಞತಾ ಟಿಪ್ಪಣಿಯನ್ನು ಗುರೂಜಿಯವರಿಗಾಗಿ ಓದುತ್ತೇನೆ. ಅಂತಹ ಒಂದು ಟಿಪ್ಪಣಿಯ ಆಯ್ದ ಭಾಗ ಈ ಕೆಳಕಂಡಂತಿದೆ: – ಲೈಟ್ ಚಾನೆಲಿಂಗ್ ಎಂತಹ ಅದ್ಭುತವಾದ ತಂತ್ರವೆಂದರೆ ನಾನು ಅದನ್ನು ಕನಿಷ್ಟ ಒಂದು ಲಕ್ಷ ಮಕ್ಕಳಿಗೆ ಕಲಿಸಬೇಕೆನ್ನುವ ನನ್ನ ಗುರಿಯನ್ನು ಬಿಡದೆ ಮುಂದುವರೆಸಬೇಕೆಂದು ಬಯಸುತ್ತೇನೆ. ನನ್ನ ಜೀವನದ ಉದ್ದೇಶವನ್ನು ಕಂಡುಕೊಂಡು ಅದನ್ನು ಈಡೇರಿಸದಿದ್ದರೂ ಪರವಾಗಿಲ್ಲ ಆದರೆ ಲೈಟ್ ಚಾನೆಲಿಂಗ್‌ಅನ್ನು ಪ್ರತಿಯೊಬ್ಬರಿಗೂ ಕಲಿಸಿಕೊಡಬೇಕು; ಮತ್ತು ಅದನ್ನೇ ನನ್ನ ಜೀವನದ ಉದ್ದೇಶವನ್ನಾಗಿಸಿಕೊಳ್ಳಬೇಕೆಂದು ನನಗೆ ಅನಿಸುತ್ತದೆ.

ಕೃತಜ್ಞತಾ ಟಿಪ್ಪಣಿಯನ್ನು ಓದುವ ಸಮಯದಲ್ಲಿ ಇದನ್ನು ಒಂದು ಆಶಯವೆಂದು ವ್ಯಕ್ತಪಡಿಸುವ ಭಾವನೆಯಲ್ಲಿ ಮತ್ತು ಅದನ್ನು ವಾಸ್ತವದಲ್ಲಿ ಕಾರ್ಯಗತಗೊಳಿಸುವುದರಲ್ಲಿ ಅಗಾಧವಾದ ವ್ಯತ್ಯಾಸವಿದೆ.

2022ರಲ್ಲಿ ಜರುಗಿದ ಗುರೂಜಿಯವರ ಜನ್ಮದಿನೋತ್ಸವದ ಸಮಯದಲ್ಲಿ ನನಗೆ ಲೈಟ್ ಚಾನೆಲಿಂಗ್ ಕಾರ್ಯಕರ್ತನಾಗಿ ದೀಕ್ಷೆ ನೀಡಲಾಯಿತು. ಈ ಪಯಣವು ಇಷ್ಟು ಸುಂದರವಾಗಿರಬಹುದೆಂದು ನಾನು ಎಂದಿಗೂ ಊಹಿಸಿರಲಿಲ್ಲ. ಈ ತಂತ್ರವನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡ ನಂತರ ನನ್ನ ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ಆತ್ಮ ಸಂತೃಪ್ತಿಯ ಅನುಭವವಾಯಿತು.

ನಾನು ಲೈಟ್ ಚಾನೆಲಿಂಗ್ ಕಲಿಸುವ ದಿನಗಳಲ್ಲಿ ನನಗೆ ಜೀವಂತಿಕೆಯ ಅನುಭವವಾಗುತ್ತದೆ. ಈ ನನ್ನ ಶರೀರವು ಬದುಕಿರಲು ಯೋಗ್ಯ ಎಂದು ಮೊದಲ ಬಾರಿಗೆ ಸಂತಸವಾಗುತ್ತಿದೆ. ನನ್ನೊಳಗೆ ಒಂದು ಕಿಚ್ಚು ಇದೆ ಮತ್ತು ಕಷ್ಟಕರವಾದ ಹವಾಮಾನವಿದ್ದರೂ ಅಥವಾ ಆರೋಗ್ಯದ ಸಮಸ್ಯೆ ಇದ್ದರೂ ಕೂಡ ಹೊರಹೋಗಿ ಅಚಲವಾದ ಬದ್ಧತೆ ಮತ್ತು ಪ್ರೀತಿಯಿಂದ ಋಷಿಗಳ ಕೆಲಸ ಮಾಡಲು ಅದು ನನ್ನನ್ನು ಪ್ರೇರೇಪಿಸುತ್ತದೆ. ಕೆಲವೊಮ್ಮೆ ನನಗೆ ಗಂಟಲು ನೋವಿರುತ್ತದೆ, ಆಗ ನಾನು ನಾಳೆಯ ಸೆಷನ್‌ಗೆ ಹೋಗಲು ಹೇಗೆ ಸಾಧ್ಯ ಎಂದು ಚಿಂತಿತನಾಗುತ್ತೇನೆ, ಆದರೆ ಬದ್ಧತೆಯೆಂದರೆ ಬದ್ಧತೆಯೇ, ನಾನು ಮರುದಿನದ ಸೆಷನ್‌ಗೆ ಹೋದಾಗ ಯಾವುದೇ ರೀತಿಯ ಗಂಟಲು ನೋವನ್ನು ಅನುಭವಿಸುವುದಿಲ್ಲ! ಕೆಲವೊಮ್ಮೆ ನಾನು ಊಟವನ್ನು ತಪ್ಪಿಸಿಕೊಳ್ಳಬೇಕಾಯಿತು ಆದರೆ ನನ್ನ ದೇಹವು ಯಾವುದೇ ರೀತಿಯ ಆಹಾರದ ಅಭಾವವನ್ನು ಅನುಭವಿಸಲಿಲ್ಲ. ನನ್ನ ಆರೈಕೆಯನ್ನು ಸದಾ ನೋಡಿಕೊಳ್ಳಲಾಗುತ್ತದೆ.

ಜಗತ್ತಿನ ವಿವಿಧ ಸಮಸ್ಯೆಗಳಿಗೆ ವಿವಿಧ ಪರಿಹಾರಗಳ ಅವಶ್ಯಕತೆ ಇರುತ್ತದೆ ಮತ್ತು ದುಃಖಕರ ವಿಷಯವೆಂದರೆ ಜಗತ್ತಿನ ಮುಖಂಡರು ತಮ್ಮದೇ ಕಾರ್ಯಕಲಾಪಗಳನ್ನು ಮುನ್ನಡೆಸಲು ಉತ್ಸುಕರಾಗಿದ್ದು ಒಂದೇ ಅಭಿಪ್ರಾಯವನ್ನು ಹೊಂದಿರುವುದಿಲ್ಲ. ಹಿಂದೆಂದೂ ಕಂಡಿಲ್ಲದ ಬಿಕ್ಕಟ್ಟಿನ ಮಧ್ಯೆಯೂ ಗುರೂಜಿಯವರು ನಮಗೊಂದು ಅದ್ಭುತವಾದ ಹಾಗೂ ಪ್ರಭಾವಶಾಲಿಯಾದ ಸಾಧನವೊಂದನ್ನು ನೀಡಿದ್ದಾರೆ, ಅದೇ ಲೈಟ್ ಚಾನೆಲಿಂಗ್ ತಂತ್ರ. ಇದು ಎಲ್ಲ ಪ್ರಸಕ್ತ ಸಮಸ್ಯೆಗಳಿಗೆ ಪರಿಹಾರ ನೀಡುವುದು ಮಾತ್ರವಲ್ಲದೇ ಭವಿಷ್ಯದಲ್ಲಿ ಎದುರಾಗಬಹುದಾದ ಸಮಸ್ಯೆಗಳಿಗೂ ಪರಿಹಾರ ನೀಡುತ್ತದೆ. ಆಶ್ಚರ್ಯಕರವಾಗಿ, ಇದು ನಮ್ಮನ್ನು ಪ್ರೀತಿಯ ಮತ್ತು ಶಾಂತಿಯುತ ಮಾನವರನ್ನಾಗಿ ಮಾಡುತ್ತದೆ ಮತ್ತು ಅದರಿಂದ ನಾವು ಪರಸ್ಪರರೊಂದಿಗೆ ಮತ್ತು ಪ್ರಕೃತಿಯೊಂದಿಗೆ, ವಿಶೇಷವಾಗಿ ಜಗತ್ತು ಸದ್ಯದಲ್ಲೇ 8 ಶತಕೋಟಿ ಜನಸಂಖ್ಯೆಯನ್ನು ತಲುಪುತ್ತಿರುವ ಸಮಯದಲ್ಲಿ, ಸಾಮರಸ್ಯದಿಂದ ಅನಾಯಾಸವಾಗಿ ಜೀವನ ಮಾಡುವಂತೆ ಮಾಡುತ್ತದೆ. ಗುರೂಜಿಯವರ ದೂರದೃಷ್ಟಿಯನ್ನು ಗ್ರಹಿಸುವುದು ಸುಲಭವಲ್ಲ ಆದರೆ ಅದನ್ನು ಕಾರ್ಯಗತಗೊಳಿಸುವುದು ಬಹಳ ಸುಲಭ!

ಜಗತ್ತಿನಲ್ಲಿ ಸರ್ವೇಸಾಮಾನ್ಯವಾಗಿರುವ ನಕಾರಾತ್ಮಕತೆಗಳು ಹಾಗೂ ನಿರಾಶಾದಾಯಕ ಸನ್ನಿವೇಶಗಳಾದ ಮಾನಸಿಕ ಒತ್ತಡ, ಅನಾರೋಗ್ಯ, ಕುಸಿಯುತ್ತಿರುವ ಆರ್ಥಿಕತೆಗಳು, ಬಡತನ, ಹಸಿವು, ನಿರುದ್ಯೋಗ, ಪರಿಸರ ವಿನಾಶ, ಬರಿದಾಗುತ್ತಿರುವ ಸಂಪನ್ಮೂಲಗಳು, ಭ್ರಷ್ಟಾಚಾರ, ಯುದ್ಧ, ಮಾದಕ ವ್ಯಸನ ಇತ್ಯಾದಿಗಳ ಬಗ್ಗೆ ನನಗಿದ್ದ ಆತಂಕವನ್ನು ಲೈಟ್ ಚಾನೆಲಿಂಗ್ ಶಮನಗೊಳಿಸಿದೆ.

ಲೈಟ್ ಚಾನೆಲಿಂಗ್ ಅಭ್ಯಾಸಿಗಳು ಭವಿಷ್ಯದಲ್ಲಿ ರಾಜಕಾರಣಿಗಳು, ಅಧಿಕಾರಶಾಹಿಗಳು, ಜಗದ ಮುಖಂಡರು ಅಥವಾ ಸಭ್ಯ ಮಾನವರಾಗುವ ಭರವಸೆಯನ್ನು ಕಾಣುತ್ತೇನೆ.

ಆದುದರಿಂದ, ನಾನು ಪ್ರತಿಯೊಬ್ಬರಿಗೂ ಸಾಧ್ಯವಾದಷ್ಟು ಲೈಟ್ ಚಾನಲ್ ಮಾಡಿ ಎಂದು ಮನವಿ ಮಾಡಿಕೊಳ್ಳುತ್ತೇನೆ. ಬೆಳಕಿನ ಯುಗದ ಉದಯ ನಮ್ಮ ಕೈಯಲ್ಲಿಯೂ ಸಹ ಇದೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ಕೆಳಗೆ ತಿಳಿಸಿದ ನಮ್ಮ ಲೈಟ್ ಚಾನಲಿಂಗ್ ಕೇಂದ್ರದಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

**ಶುಕ್ರವಾರ** (ಬೆಳಿಗ್ಗೆ 11 ರಿಂದ 11.15ರ ತನಕ)
ಸಿದ್ಧಿ ವಿನಾಯಕ ದೇವಸ್ಥಾನ, 59/1,
ಹಚಿನ್ಸ್ ರಸ್ತೆ, 3ನೇ ಅಡ್ಡ ರಸ್ತೆ,
ಕೂಕ್ ಟೌನ್, ಬೆಂಗಳೂರು.
✆ 9980205803 ನಿರ್ಮಲ ಬಾಲ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5779 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 29.71 ಲಕ್ಷ |

ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



# ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಸುಜಾತ ರಾಮರಾವ್**

ಲೈಟ್ ಚಾನೆಲಿಂಗ್ ನನ್ನಲ್ಲಿರುವ ನಕಾರಾತ್ಮಕ ಭಾವನೆಗಳನ್ನು ಕಡಿಮೆ ಮಾಡಲು ಸಹಾಯ ಮಾಡಿದೆ. ಈ ಮೊದಲು ನಕಾರಾತ್ಮಕ ಭಾವನೆಗಳಲ್ಲಿ ನಿರಂತರವಾಗಿ ಸಿಲುಕಿಕೊಂಡಿರುತ್ತಿದ್ದೆ. ದೇವರ ಬೆಳಕು ನನ್ನೊಳಗೆ ಮತ್ತು ಹೊರಗೆ ತುಂಬುತ್ತದೆ ಮತ್ತು ನಾನು ಸದಾ ದೇವರ ರಕ್ಷಣಾ ವಲಯದಲ್ಲಿದ್ದೇನೆ ಎಂದು ನನಗೆ ಅನಿಸುತ್ತದೆ. ನನ್ನ ಮನಸ್ಸು ಕುಗ್ಗಿದಾಗ, ನಾನು ಬೆಳಕನ್ನು ಚಾನೆಲ್ ಮಾಡುತ್ತೇನೆ. ಬೆಳಕು ನನ್ನನ್ನು ಆವರಿಸುವುದನ್ನು ಮತ್ತು ಸಾಂತ್ವನಗೊಳಿಸುವುದನ್ನು ನಾನು ಅನುಭವಿಸಿದ್ದೇನೆ. ನನ್ನ ಭಯ ಮತ್ತು ಆತಂಕಗಳನ್ನು ಬೆಳಕು ನಿಧಾನವಾಗಿ ತೆಗೆದುಹಾಕುತ್ತಿದೆ. ನನಗೆ ಸದಾಕಾಲ ತೂಕಡಿಕೆ ಬರುತ್ತಿತ್ತು, ದಣಿವಾಗುತ್ತಿತ್ತು ಹಾಗೂ ಯಾವಾಗಲು ನಿಶ್ಯಕ್ತಿಯೆನಿಸುತ್ತಿತ್ತು. ಈಗ ನಾನು ಚೈತನ್ಯ ಮತ್ತು ಉತ್ಸಾಹ ಭರಿತಳಾಗಿದ್ದೇನೆ. ನಾನು ರಾತ್ರಿಯಲ್ಲಿ ಹೆಚ್ಚು ಸಮಯ ಬೆಳಕನ್ನು ಚಾನೆಲ್ ಮಾಡುತ್ತೇನೆ. ದೇವರ ರಕ್ಷಣೆ ಇದೆ ಎಂಬ ಸಂತೋಷದ ಭಾವನೆಯಿಂದ ನಾನು ನಿದ್ದೆ ಮಾಡುತ್ತೇನೆ ಮತ್ತು ಚೈತನ್ಯ ಭರಿತಳಾಗಿ ಏಳುತ್ತೇನೆ ಹಾಗೂ ಬೆಳಗಿನ ಮನೆಗೆಲಸಗಳನ್ನು ಉತ್ಸಾಹದಿಂದ ಮಾಡುತ್ತೇನೆ. ನನ್ನ ಪ್ರತಿದಿನದ ಕೆಲಸಗಳನ್ನು ಹೆಚ್ಚು ಸಂತೋಷದಿಂದ ಹಾಗೂ ಹುರುಪಿನಿಂದ ಬೇಗ ಮಾಡಲು ಸಾಧ್ಯವಾಗಿದೆ. ನನ್ನ ಮನಸ್ಸು ಮತ್ತು ದೇಹ ಉತ್ತಮಗೊಂಡಿವೆ. ನಾನು ಆರೋಗ್ಯವಂತಳಾಗಿದ್ದೇನೆ. ಬೆಳಕೇ ನನ್ನ ಜೀವನ. ಧನ್ಯವಾದಗಳು!

–ಉಮಾದೇವಿ ಎಂ, ಲೈಟ್ ಚಾನೆಲ್

ಲೈಟ್ ಚಾನೆಲಿಂಗ್ ಅತ್ಯುತ್ತಮವಾಗಿದೆ. ಇದು ನನ್ನಲ್ಲಿ ವಿಶ್ರಾಂತಿಯನ್ನುಂಟುಮಾಡುವ ಒಂದು ಸುಲಭವಾದ ವಿಧಾನವಾಗಿದೆ. ಧನ್ಯವಾದಗಳು.

–ಭುವನ, ಲೈಟ್ ಚಾನೆಲ್

ದೀರ್ಘಕಾಲದ ಅನಾರೋಗ್ಯದಿಂದ ಹಾಸಿಗೆ ಹಿಡಿದು ಮಲಗಿದ್ದ ನನ್ನ ಅತ್ತೆಗೆ ಶಾಂತಿಯುತವಾಗಿ ಸಾವನ್ನಪ್ಪಲು ಲೈಟ್ ಚಾನೆಲಿಂಗ್ ಸಹಾಯ ಮಾಡಿತು ಎಂದು ನಾನು ನಂಬಿದ್ದೇನೆ.

–ರಾಜಲಕ್ಷ್ಮಿ ಆರ್, ಲೈಟ್ ಚಾನೆಲ್

ನನಗೆ 88 ವರ್ಷಗಳಾಗಿದೆ. ಎಲ್ಲ ದಿಕ್ಕುಗಳಲ್ಲಿ ಓಡುತ್ತಿರುವ ನನ್ನ ಚಂಚಲವಾದ ಮನಸ್ಸನ್ನು ಲೈಟ್ ಚಾನೆಲಿಂಗ್ ನಿಶ್ಚಲವಾದ ಸ್ಥಿತಿಗೆ ತರುತ್ತದೆ, ಆ ಪ್ರಕಾರ ನನ್ನಲ್ಲಿ ಹೊಸ ಚೈತನ್ಯಗಳನ್ನು ತುಂಬುತ್ತದೆ. ನನ್ನ ಜ್ಞಾಪಕಶಕ್ತಿ ಮತ್ತು ಆರೋಗ್ಯ ಉತ್ತಮಗೊಂಡಿದೆ.

–ಕಣ್ಣನ್ ಆರ್, ಲೈಟ್ ಚಾನೆಲ್

ದಿನಪೂರ್ತಿ ಶಾಂತಿ ಸಮಾಧಾನಗಳಿಂದಿರಲು ಲೈಟ್ ಚಾನೆಲಿಂಗ್ ನನಗೆ ಸಹಾಯ ಮಾಡುತ್ತದೆ.

–ಮನೋದಿವ್ಯ, ಲೈಟ್ ಚಾನೆಲ್

ನಾನೊಬ್ಬ ಉದ್ಯಮಿ. ಕರೋನ ಸಮಯದಲ್ಲಿ ನನಗೆ ಬಹಳ ಸಮಸ್ಯೆಗಳಿದ್ದವು ಮತ್ತು ಅವುಗಳಿಂದ ಹೇಗೆ ಹೊರಬರುವುದೆಂದು ನನಗೆ ತಿಳಿದಿರಲಿಲ್ಲ. ಅಕ್ಟೋಬರ್ 2021ರಲ್ಲಿ ನಾನು ಲೈಟ್ ಚಾನಲ್ ಮಾಡುವುದನ್ನು ಕಲಿತೆ ಮತ್ತು ತುಂಬಾ ಶ್ರದ್ಧೆಯಿಂದ ಪ್ರತಿದಿನ ಅದನ್ನು ಬೆಳಗ್ಗೆ ಮತ್ತು ರಾತ್ರಿ ಅಭ್ಯಾಸ ಮಾಡಲು ಆರಂಭಿಸಿದೆ. ನನಗೆ ಅದ್ಭುತವಾದ ಅನುಭವಗಳಾದವು. ಲೈಟ್ ಚಾನೆಲ್ ಮಾಡಿದ್ದರಿಂದ ನನ್ನ ಮನಸ್ಸಿನಲ್ಲಿ ಮೂಡುತ್ತಿದ್ದ ಕ್ಷುಲ್ಲಕವಾದ ಆಲೋಚನೆಗಳು ಕಡಿಮೆಯಾದದ್ದು ಅತ್ಯುತ್ತಮ ಪ್ರಯೋಜನವೆನಿಸಿತು. ನನ್ನ ಮನಸ್ಸು ಬಹಳ ಪ್ರಶಾಂತವಾಯಿತು, ಹಾಗಾಗಿ ನಾನು ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳಲು ಸಾಧ್ಯವಾಯಿತು. ಷೇರು ಮಾರುಕಟ್ಟೆಯ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ನಾನು ಬಹಳ ವರ್ಷಗಳಿಂದ ಪ್ರಯತ್ನಿಸುತ್ತಿದ್ದೆ ಆದರೆ ಅದು ಫಲಿಸಿರಲಿಲ್ಲ. ನಾನು ಡಿಸೆಂಬರ್ 2021ರಲ್ಲಿ ಆ ಪರೀಕ್ಷೆಯನ್ನು ಪಾಸು ಮಾಡಿದೆ. ಇದರ ಪೂರ್ತಿ ಶ್ರೇಯಸ್ಸನ್ನು ಲೈಟ್ ಚಾನೆಲಿಂಗ್‌ಗೆ ಸಲ್ಲಿಸುತ್ತೇನೆ ಏಕೆಂದರೆ ಈಗ ನನ್ನ ಮನಸ್ಸು ಬಹಳ ಏಕಾಗ್ರತೆಯನ್ನು ಹೊಂದಿದೆ ಮತ್ತು ಆತ್ಮವಿಶ್ವಾಸ ಹೆಚ್ಚಾಗಿದೆ. ಮನೆಯಲ್ಲಿರುವವರ ಜೊತೆ ನನ್ನ ಸಂವಹನವು (communication) ಈಗ ಉತ್ತಮಗೊಂಡಿದೆ, ಹಾಗಾಗಿ ಮನೆಯಲ್ಲಿ ಸಂತೋಷದ ವಾತಾವರಣವಿದೆ. ಇದರಿಂದಾಗಿ ನನ್ನ ಉದ್ಯಮಕ್ಕೆ ಹೆಚ್ಚು ಸಮಯ ದೊರೆಯುತ್ತಿದೆ. ಒತ್ತಡಗಳು ಮತ್ತು ಚಿಂತೆಗಳು ಕಡಿಮೆಯಾದ್ದರಿಂದ ನಾನು ಚೆನ್ನಾಗಿ ನಿದ್ದೆ ಮಾಡುತ್ತೇನೆ. ನನ್ನ ಮನಸ್ಸು ಪ್ರಶಾಂತವಾಗಿದೆ ಮತ್ತು ಜೀವನವನ್ನು ಆನಂದಿಸಲು ಸಾಧ್ಯವಾಗಿದೆ.

–ಆಶಿಶ್, ಭುಜ್‌ಬಲ್, ಲೈಟ್ ಚಾನೆಲ್

ಲೈಟ್ ಚಾನೆಲಿಂಗ್ ನನಗೆ ಅತಿ ಅಗತ್ಯವಾಗಿ ಬೇಕಾಗಿತ್ತು. ನಾನು ನವೀನತೆಯನ್ನು ಅನುಭವಿಸಿದೆ. ನನ್ನ ಎಲ್ಲ ಸಹೋದ್ಯೋಗಿಗಳಿಗೆ ಮತ್ತು ನೆರೆಯವರಿಗೆ ಬೆಳಕನ್ನು ಕಳುಹಿಸಿದೆ.

–ಸುಷ್ಮ, ಶಿಕ್ಷಕಿ, ಎಸ್.ಎಸ್.ಪಿ.ಎಂ.ಎಸ್ ಸ್ಕೂಲ್, ಪುಣೆ

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ